
ನಾಟುತ್ತದೆ. ಈ ಸಂಕಥನಗಳ ಹಿನ್ನೆಲೆಯಿಂದ 'ಸೀತಾಯಣ'ದ ಅರ್ಪಣೆ ನಮ್ಮನ್ನು ಇರಿಯುತ್ತದೆ. ಪೋಲಂಕಿಯವರ ಈ ಅರ್ಪಣೆ ಲೇಖಕನೊಬ್ಬ ಸಂವೇದನೆಯಿಂದ ಲೋಕವನ್ನು ನೋಡಲು ಬಯಸಿದಾಗ ಕಾಣುವ ವಾಸ್ತವಗಳನ್ನು ಎತ್ತಿ ತೋರುತ್ತಿದೆ. ಈ ದೇಶದ ಎಲ್ಲ ಮಹಿಳೆಯರೂ ಅಸ್ಪೃಶ್ಯರೇ ಎಂಬುದನ್ನು ಸಾರುತ್ತಿದೆ. 'ಕಾನೂರು ಹೆಗ್ಗಡಿತಿ'ಯಲ್ಲಿ ಸೀತೆ ಏಕೆ ಓದಲಿಲ್ಲ ಎಂಬುದಕ್ಕೆ ನಿರೂಪಕರು 'ಹೆಂಗಸರು ಓದುವುದು, ಗಂಡಸರು ಸೀರೆ ಉಡುವುದಕ್ಕಿಂತಲೂ ಹಾಸ್ಯಾಸ್ಪದವಾಗಿತ್ತು' ಎಂದು ನಿರೂಪಿಸುತ್ತಾರೆ. 'ಮಲೆಗಳಲ್ಲಿ ಮದುಮಗಳು' ಕಾದಂಬರಿ "ಮುಟ್ಟಾದ ಮೂರು ದಿನವಾದರೂ ಮಲೆನಾಡಿನ ಮಹಿಳೆಯರಿಗೆ ನಿವೃತ್ತಿ ಜೀವನದ ವಿರಾಮದ ಹಕ್ಕು ಇರುತ್ತಿತ್ತಷ್ಟೆ!" ಎನ್ನುವ ವಾಕ್ಯಕ್ಕೆ ಬಂದು ಮುಟ್ಟುತ್ತದೆ.



ವಸುದೇವ ಭೂಪಾಲಂ ಅವರ 'ದೇವರು ಸತ್ತ' ಕೃತಿಯ ಅರ್ಪಣೆ ತತ್ವಕ್ಕೆ ಬದ್ಧವಾಗಿರಬೇಕೆಂದು ಅಪೇಕ್ಷಿಸುತ್ತದೆ. "ವೈಚಾರಿಕತೆಯನ್ನೇ ತಮ್ಮ ಜೀವನದ ಉಸಿರಾಗಿಸಿಕೊಂಡು ಕುಟುಂಬದಿಂದ, ಸಮಾಜದಿಂದ, ಬಂಧು- ಮಿತ್ರರಿಂದ ತಿರಸ್ಕಾರಕ್ಕೆ, ಅಪಮಾನಕ್ಕೆ ಮತ್ತು ಹಾಸ್ಯಕ್ಕೆ ಒಳಗಾದಾಗ್ಯೂ, ನಂಬಿದ ಸಿದ್ಧಾಂತವನ್ನು ಜೀವನದ ಕೊನೆಯ ಕ್ಷಣದವರೆಗೂ ಅನುಸರಿಸಿಕೊಂಡು ಬಂದ ಜಗತ್ತಿನ ಪ್ರತಿಯೊಬ್ಬ ವಿಚಾರವಾದಿಗೂ..." ಧಾರ್ಮಿಕತೆಯೇ ಪ್ರಧಾನವಾಗಿರುವ ನಮ್ಮ ದೇಶದಲ್ಲಿ ರ್‍ಯಾಡಿಕಲ್ ಥಿಂಕರ್ಸ್‌ಗಳು ಅನುಭವಿಸಬೇಕಾದ ಪಡಿಪಾಟಲನ್ನು ಹೇಳುವುದರ ಜೊತೆಗೆ ವಿಚಾರವಾದಿ ತನ್ನವರಿಂದಲೇ ಅನ್ಯನಾಗಲು ಸಿದ್ಧನಿರಬೇಕೆಂಬುದನ್ನು ಈ ಅರ್ಪಣೆ ಅನುಭವಿಸಿ ದಂತಿದೆ. 'ನ್ಯಾಯನಿಷ್ಠುರಿ ದಾಕ್ಷಿಣ್ಯಪರ ನಾನಲ್ಲ, ಲೋಕವಿರೋಧಿ ಶರಣನಾರಿಗಂಜುವನಲ್ಲ' ಎಂದು ಬಸವಣ್ಣ ಹೇಳುವಾಗಲೂ ಈ ಸವಾಲನ್ನು ಆತ ಎದುರಿಸಿ ನಿಂತಿರಬಹುದು. ವಿಚಾರ ಪ್ರತಿಪಾದನೆಗಾಗಿ ಕಟಿಬದ್ಧರಾದವರು ಎಂತಹುದೇ ಸಂದರ್ಭ ಎದುರಾದರೂ ಅದಕ್ಕಂಜದಿರಬೇಕೆಂಬ ಧೀರನಿಷ್ಠೆ ಭೂಪಾಲಂ ಅವರ ಅರ್ಪಣೆಯಲ್ಲಿದೆ. ನಮ್ಮ ಆರಂಭದ ವಿಚಾರವಾದಿಗಳು ತಾವು ಮಂಡಿಸಬೇಕಿದ್ದ ವಿಚಾರಗಳನ್ನು ಕಹಿಯಾದ ಶೈಲಿಯಲ್ಲಿ ಹೇಳಿ ಧಾರ್ಮಿಕರ ಕಣ್ಣಲ್ಲಿ ದುರುಳರಂತೆ ಕಂಡರೆನಿಸುತ್ತದೆ. ಜನರಲ್ಲಿ ವೈಚಾರಿಕ ಅರಿವನ್ನು ಬಿತ್ತಬಯಸುವವರು ಅವರಲ್ಲೊಬ್ಬರಾಗಿ ಬೆರೆಯಬೇಕು. ಅಪ್ರಿಯವಾಗಿರಬಹುದಾದ ಸತ್ಯವನ್ನು ಪ್ರಿಯವಾಗುವಂತೆ ಹೇಳಬೇಕು. ತನ್ನ ಸಿದ್ಧಾಂತವನ್ನು